## ನಿಮಗಿಂತ ಫಸ್ಟ್ ಬಂದಿರ್ತೀನಿ ಸಾರ್!

ನಾನು ಬಸ್ ನಿಲ್ದಾಣದಲ್ಲಿ ಶಾಲೆಗೆ ಹೊರಡಲು ಒಂಭತ್ತು ಗಂಟೆಯ ಬಸ್‌ಗಾಗಿ ಕಾಯುತ್ತ ನಿಂತಿದ್ದೆ. ಆಗ ಅಲ್ಲಿಗೆ ಬಂದ ಎಂಟನೆ ತರಗತಿಯ ರಮೇಶನ ತಂದೆ ಮುನಿಬಸಪ್ಪ 'ನಮಸ್ತೆ ಸಾರ್. ನನ್ನ ಮಗ ರಮೇಶನ ಮ್ಯಾಲೆ ಬೆಟ್ಟದಷ್ಟು ಆಸೆ ಇಟ್ಕೊಂಡಿದೀನಿ, ಆದ್ರೆ ಓದೋದ್ರಲ್ಲಿ ಅಷ್ಟಕಷ್ಟೆ, ನೀವು ಏನಾರ ಮಾಡಿ ಅವನಲ್ಲಿ ಓದೋ ಕಿಚ್ಚು ಹಚ್ಚಿ. ನಿಮಗೆ ಪುಣ್ಯ ಬರುತ್ತೆ' ಅಂತೆಲ್ಲ ಹೇಳಿ ಹೋದ. ನಾನು ತರಗತಿಗೆ ಹೋದಾಗ 'ರಮೇಶ ಇನ್ಮುಂದೆ ನೀನು ಇಡೀ ಕ್ಲಾಸಿಗೆ ಫಸ್ಟ್ ಬರಬೇಕು ತಿಳೀತಾ?' ಅಂತ ಅಂದದ್ದಕ್ಕೆ, ರಮೇಶ 'ಆಯ್ತು ಸರ್ ಇನ್ಮುಂದೆ ನಿಮಗಿಂತ ಫಸ್ಟ್ ಬಂದಿರ್ತೀನಿ ಸಾರ್' ಎಂದು ಉತ್ತರಿಸಿದ!

**ಮಲ್ಲಿಕಾರ್ಜುನ, ಸುರಧೇನುಪುರ**





ಕಲೆ: ಗಣೇಶ ಆಚಾರ್ಯ

## ನೆಕ್ಲೇಸ್..

'ಆಷಾಢ ಸೇಲ್' ಎಂದು ಸೀರೆ ಅಂಗಡಿಗೆ ಶಾಪಿಂಗ್ ಮಾಡಲು ಗೆಳತಿಯರೆಲ್ಲ ದಾಂಗುಡಿಯಿಟ್ಟಿದ್ದೆವು. ಅಂಗಡಿಯಲ್ಲಿ ರಾಶಿ ರಾಶಿ ಸೀರೆಗಳನ್ನೆಲ್ಲಾ ತೆಗೆಸಿಹಾಕಿ, 'ಇನ್ನೂ ಹೊಸ ಡಿಸೈನ್ ಯಾವುದೂ ಬಂದಿಲ್ಲವೇನ್ರೀ' ಎಂದು ಕೇಳಿದಾಗ, ಸೀರೆ ತೋರಿಸುವ ಹುಡುಗ 'ಏಯ್, ಈ ಆಂಟಿಗಳಿಗೆ ನೆಕ್ಲೇಸ್ ತರ್ರೋ' ಎಂದು ಮತ್ತೊಬ್ಬನಿಗೆ ಕೂಗಿ ಹೇಳಿದ. ನಾವೆಲ್ಲ ಕಕ್ಕಾಬಿಕ್ಕಿಯಾದೆವು. ಆ ಹುಡುಗ ಹೊಸದಾಗಿ ತಂದಿಟ್ಟ ಸೀರೆ ಬಾಕ್ಸ್ ತೆಗೆದು 'ಇವು ನೆಕ್ಲೇಸ್ ಸೀರೆ ನೋಡ್ರಿ ಅಂಟೀ, ಇದನ್ನು ಉಟ್ಟರೆ ನೆಕ್ಲೇಸ್ ಹಾಕುವುದೇ ಬೇಕಿಲ್ಲ' ಎಂದಾಗ ಎಲ್ಲರೂ ತಬ್ಬಿಬ್ಬು.

**ನಳಿನಿ ಟಿ. ಭೀಮಪ್ಪ, ಧಾರವಾಡ**